ಮೇಲೆ ಆ ಜಮೀನು ನನ್ನದೇ ಎಂದು ಹೇಳಲಿಕ್ಕೆ ಅವರಿಗೆ ಹಕ್ಕು ಇದೆಯೇ? ಇವೊತ್ತು ಮಾನ್ಯ ಮಂತ್ರಿಗಳು ದಾನ ತೆಗೆದುಕೊಂಡಿರತಕ್ಕಂತಹ ಭೂಮಿಯನ್ನೆಲ್ಲಾ ಬಡವರಿಗೆ ಹಂಚಲಿಕ್ಕೆ ಕ್ರಮ ತೆಗೆದುಕೊಳ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ.ಬಸವಲಿಂಗಪ್ಪ:—ಸ್ವಾಮಿ, ನಾನು ಪತ್ರ ಮಾಡಲಿಕ್ಕೆ ವಿಶಿಷ್ಟ ಪ್ರಯತ್ನ ಮಾಡಿದ್ದೇವೆ. ಪ್ರಯತ್ನ ಮಾಡಿದ ಮೇಲೆ ಇನ್ನೂ ಮೂರು ಸಾವಿರ ಎಕರೆ ಉಳಿದಿದೆ ಎಂದು ಹೇಳಿದ್ದಾರೆ. ಅದನ್ನು ಹಂಚಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಪದೇ ಪದೇ ಹೇಳಿದ್ದೇನೆ. ಅದು ಅರ್ಥವಾಗದೇ ಹೋದರೆ ಹೇಗೆ? ಈಗ ಯಾರ ಸ್ವಾಧೀನದಲ್ಲಿಯೇ ಇರಲಿ ಕಿತ್ತುಕೊಂಡು ಹಂಚಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ.ಮಾದೇಗೌಡ:—ಮಾನ್ಯ ಮಂತ್ರಿಗಳು ಯಾರಿಗೂ ಅರ್ಥ ಆಗಬಾರದು ಎಂದು ಹೇಳಿದರು ನನಗೆ ಅರ್ಥವಾಗುತ್ತದೆ. ಈಗ ಇಪ್ಪತ್ತೈದು ವರ್ಷಗಳಿಂದಲೂ ಇಟ್ಟುಕೊಂಡಿರತಕ್ಕವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ಅಂದರೆ, ಅವರಿಗೆ ಅರ್ಥವಾಗದೇ ಹೋದರೆ ಹೇಗೆ ಎಂದು ಹೇಳುತ್ತಿದ್ದಾರೆ. ಅದು ನಮಗೆ ಅರ್ಥವಾಗುವುದಿಲ್ಲವೇ?

ಶ್ರೀ ಬಿ.ಬಸವಲಿಂಗಪ್ಪ:—ಅಧ್ಯಕ್ಷರೇ, ಭೂದಾನ ಕೊಟ್ಟಿರುವ ಬಗ್ಗೆ ಬಹು ಭಾಗವನ್ನು ಗುರುತಿಸಲಿಕ್ಕೆ ಆಗಿಲ್ಲ ಎಂದು ಪದೇ ಪದೇ ಹೇಳಿದ್ದೇನೆ. ಈಗ ಇಷ್ಟು ಜಮೀನಿನಲ್ಲಿ ಮೂರು ಸಾವಿರ ಎಕರೆ ಗುರುತಿಸಿದ್ದೇವೆ. ಅದನ್ನು ಹಂಚಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.

Belgaum Dist. Central Cooperative Bank Employees

755. SRI G. K. TAKKED (Parasgad) -- Will the Minister for Co-operation be pleased to state :—

(a) the number of employees in District Central Co-operative Bank, Belgaum district ;

(b) out of them, the percentage of representation to Harijans and Girijans ;

(c) if no representation is given, the action taken by the Government ;

(d) the number of vacant posts filld up by the President, Central Bank on his own responsibility and whether the Government has accorded its approval to the same ;

(e) if not, the action taken by the Government ?

SRI V.M. KUSHNOOR (Minister for Co-operation).—

(a) 438.

(b) 1.

(c) (i) The Government has issued an order No. RDC 20 CLM 77 dated 29-6-1977 reserving 15% for Harijans, 3% for Girijans and 40% for Backward Classes. The order has been issued to the Bank to follow the same.

(ii) A Committee has been constituted to make appointment of Bank Staff with Districtwide jurisdiction.

(d) The President has made 50 temporary appointments in exercise of the powers given to him by the Board of Management. Out of this number 4 belong to Harijans and one to backward class.

(e) (i) Orders have been issued to reserve the posts as per Government Order of 29-6-1977 while making appointments.

(ii) An Explanation from the Bank will be called for not obtaining the approval for temporary appointments.

ಶ್ರೀ ಜಿ. ಕೆ. ತಕ್ಕೇಡ್— ಸ್ವಾಮಿ, ಈ ಜಿಲ್ಲಾ ವ್ಯಾಪ್ತಿಯುಳ್ಳ ಈ ಬ್ಯಾಂಕಿನ ಸಿಬ್ಬಂದಿಯ ನೇಮಕಗಳನ್ನು ಮಾಡಲು ಅಧಿಕಾರ ಹೊಂದಿದ ಸಮಿತಿಯನ್ನು ಸರ್ಕಾರ ರಚಿಸಲಾಗಿದೆ ಎಂದು ಹೇಳಿದ್ದೀರಿ. ಈ ಸಮಿತಿಯನ್ನು ಸರ್ಕಾರ ನೇಮಿಸಿದೆಯೋ ಅಥವಾ ಬ್ಯಾಂಕಿನವರೇ ನೇಮಿಸಿದ್ದಾರೆಯೋ ?

†ಶ್ರೀ ವಿ.ಎಂ. ಕುಸನೂರ್—ಸರ್ಕಾರ ನೇಮಿಸಿದ್ದು.

ಶ್ರೀ ಜಿ.ಕೆ. ತಕ್ಕೇಡ್—ಸರ್ಕಾರ ನೇಮಿಸಿದ್ದೇ ಆದರೆ ಈ ಸಮಿತಿಯಲ್ಲಿ ಯಾರು ಯಾರು ಇದ್ದಾರೆ ಅದರ ಬಗ್ಗೆ ವಿವರಣೆ ಕೊಡುತ್ತೀರಾ ?

SRI V. M. KUSHNOOR—The D.C.C. Bank Chairman will be the Chairman of that Committee.

ಶ್ರೀ ಜಿ.ಕೆ. ತೆಕ್ಕೇಡ್—ಸ್ವಾಮಿ, ಳಿಕಿರ ಜನ ಬ್ಯಾಂಕ್ ಸಿಬ್ಬಂದಿಯಲ್ಲಿ ಕೇವಲ ಒಬ್ಬರು ಮಾತ್ರ ಹರಿಜನರು ಇದ್ದಾರೆ. ಹಿಂದೆ ನೇಮಕಾತಿಗಳನ್ನು ಮಾಡುವಾಗ ಸರ್ಕಾರದ ಪ್ರತಿನಿಧಿಗಳು ಇದ್ದರೂ ಕೂಡ ಹರಿಜನರನ್ನು ನೇಮಿಸದೆ ಅವ್ಯವಹಾರ ನಡೆದಿರುವುದರಿಂದ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ವಿ. ಎಂ. ಕುಸನೂರು—ಸ್ವಾಮಿ, ಈ ಕವಿ ಟಿ ನೇಮಿಸಿ ವರ್ಷವಾಗಿಲ್ಲ. ಹಿಂದೆ ಬ್ಯಾಂಕ್ ಪ್ರೆಸಿಡೆಂಟ್‌ಗಳಿಗೆ ಅಧಿಕಾರ ಇತ್ತು. ಹಿಂದೆ ಅಪಾಯಿಂಟ್ ಮಾಡಿಕೊಳ್ಳುವಾಗ ಈ ರಿಸರ್ವೇಷನ್ ರೇಷ್ಮೆ ಏನಿತ್ತು ಅದನ್ನು ಅಬ್ಸರ್ವ್ ಮಾಡಿಲ್ಲದೇ ಆ ರೀತಿ ಆಗಿದೆ.

ಶ್ರೀ ಜಿ.ಕೆ. ತೆಕ್ಕೇಡ್—ಸ್ವಾಮಿ, ಈಗ ಬ್ಯಾಂಕಿನ ಅಧ್ಯಕ್ಷರು ೫೦ ಜನರನ್ನು ಹಂಗಾಮಿಯಾಗಿ ನೇಮಿಸಿದ್ದಾರೆಂದು ತಿಳಿಸಿದ್ದೀರಿ. ಈ ಹಂಗಾಮಿ ನೇಮಕದ ಸಲುವಾಗಿ ಸರ್ಕಾರದವರು ಮಂಜೂರಾತಿ ಕೊಟ್ಟಿಲ್ಲ. ಆದುದರಿಂದ ಇದರ ಬಗ್ಗೆ ಸಂಪೂರ್ಣವಾಗಿ ರದ್ದುಪಡಿಸುತ್ತೀರಾ ಅಥವಾ ಅದಕ್ಕೆ ಮಂಜೂರಾತಿ ಕೊಡುತ್ತೀರಾ ?

ಶ್ರೀ ವಿ. ಎಂ. ಕುಸನೂರು—ನಾವು ಮಂಜೂರಾತಿ ಕೊಡುವುದಿಲ್ಲ. ಪೆಡ್ಯೂಲ್ಡ್ ಕ್ಯಾಸ್ಟ್, ಪೆಡ್ಯೂಲ್ಡ್ ಟ್ರೈಬ್ಸ್ ಮಂತ್ತು ಬ್ಯಾಕ್‌ವರ್ಡ್‌ಕ್ಲಾಸ್ ರೆಷ್ಮೆ ಇದರಲ್ಲಿ ಇಲ್ಲ. ಈಗ ೫೦ ಮಂದಿಯಲ್ಲಿ ನಾಲ್ಕು ಮಂದಿಯನ್ನು ಮಾತ್ರ ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾವು ಮಂಜೂರಾತಿ ಕೊಡುವುದಿಲ್ಲ.

Misuse and Misappropriation of funds of Taluk Agricultural Produce Co-operative Marketing Society, Hirekerur.

791. SRI G.B. SHANKAR RAO (Herekerur)—Will the Minister for Co-operation be pleased to state—

(a) whether Government is aware of complaints of misuse and misappropriation of funds of the Taluk Agricultural Produce Co-operative Marketing Society, Hirekerur by its Manager and Management ;